

ಪರ್ವತಶ್ರೇಣಿಗಳ ನಡುವಿನಿಂದ ಧುಮ್ಮಿಕ್ಕುವ ಜಲಧಾರೆ

ಮುಟ್ಟದೇ ಗಾಳಿಯಲ್ಲಿ ಹನಿಹನಿಗಳಾಗಿ ಚದುರಿ ಹೋಗುವುದೂ ಕಾಣುತ್ತದೆ. ಅತಿ ಮಳೆಯ ಕಾರಣದಿಂದ ಭೂ ಕುಸಿತ ಸರ್ವೇ ಸಾಮಾನ್ಯ. ಸನಿಹದಲ್ಲೇ ಇರುವ ವೈಟ್ ಐಲ್ಯಾಂಡಿನ ಜೀವಂತ ಜ್ವಾಲಾಮುಖಿಯ ಸ್ಫೋಟ, ಭೂಕಂಪ ಮುಂತಾದ ಪ್ರಕೃತಿ ವಿಕೋಪದ ಸಾಧ್ಯತೆಗಳು ದಟ್ಟವಾಗಿವೆ. ಆದರೂ ಪ್ರತಿ ವರ್ಷ ಹತ್ತು ಲಕ್ಷ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ.

## ಅವಿಸ್ಮರಣೀಯ ಪಯಣ

ಮಿಲ್‌ಫೋರ್ಡ್ ಸೌಂಡ್‌ಗೆ ಹೋಗಲು ಪ್ರಾಚೀನ ದಾರಿಗಳಾವುವೂ ಇಲ್ಲ. ಅನಾದಿಯಿಂದ ಅದು ನಿರ್ಜನ ಪ್ರದೇಶವಾಗಿತ್ತು. ಈಗಲೂ ಜನವಸತಿಯಿಲ್ಲದ ದುರ್ಗಮ ಪ್ರದೇಶವೇ ಆಗಿದೆ. ಅಲ್ಲಿಗೆ ಹೋಗಲು ರಸ್ತೆ ಮಾಡಿದ್ದೇ ಸಾಹಸಗಾಥೆ. ಕಡಿದಾದ ಬಂಡೆಗಳ ಒಡೆದು, ಸುರಂಗ ಕೊರೆದು, ನದಿಗಳಿಗೆ ಸೇತುವೆ ಕಟ್ಟಿ, ಸರೋವರಗಳ ಬಳಸಿ ಅತ್ಯಂತ ಶ್ರಮದಾಯಕ, ಅಪಾಯಕರ ಸನ್ನಿವೇಶದಲ್ಲಿ ರಸ್ತೆ ಮಾಡುತ್ತ ಹೋಗಬೇಕಿತ್ತು. ಕ್ವೀನ್ಸ್‌ಟೌನಿನಿಂದ 70 ಕಿ.ಮೀ. ದೂರ ಇರುವ ಸೌಂಡಿಗೆ 270 ಕಿ.ಮೀ. ಸುತ್ತುಬಳಸು ರಸ್ತೆ ಮಾಡಬೇಕಾಯಿತು. (ಕ್ವೀನ್ಸ್‌ಟೌನಿನಿಂದ ಹೆಲಿಕಾಪ್ಟರ್‌ನಲ್ಲಿ ಮುಕ್ಕಾಲು ಗಂಟೆಯಲ್ಲಿ ತಲುಪಬಹುದು.)

ನಾವು ಕ್ವೀನ್ಸ್‌ಟೌನಿನಲ್ಲಿ ತಂಗಿದ್ದೆವು. ದಕ್ಷಿಣ ಧ್ರುವ ಹತ್ತಿರ ಇರುವ ಕಾರಣ ಇಡಿಯ ನ್ಯೂಜಿಲೆಂಡ್ ತಂಪು ಹವೆ ಹೊಂದಿದೆ. ಕ್ವೀನ್ಸ್‌ಟೌನಿನಲ್ಲಿ ಮಳೆ ಮತ್ತು ಹಿಮ ಎರಡೂ ಸೇರಿ ಇನ್ನೂ ಹೆಚ್ಚು ಚಳಿ ಅನುಭವಕ್ಕೆ ಬರುತ್ತದೆ. ವಾಕಾಟಿಪು ಎಂಬ ಭಾರೀ ಸರೋವರದ ದಂಡೆಯಲ್ಲಿರುವ, ಹಿಮಚ್ಛಾದಿತ ಆಲ್ಪ್ಸ್ ಸೆರಗಿನಲ್ಲಿರುವ ಪ್ರವಾಸಿಗರ ಸ್ವರ್ಗ, ಕ್ವೀನ್ಸ್‌ಟೌನ್. ಇಂಗ್ಲಿಷಿನ ಝಡ್ ಅಕ್ಷರದ ಆಕಾರದಲ್ಲಿರುವ, 80 ಕಿ.ಮೀ. ಉದ್ದ, 5 ಕಿ.ಮೀ. ಅಗಲದ, ಕೆಲವೆಡೆ ಒಂದೂವರೆ ಸಾವಿರ ಅಡಿ ಆಳವಿರುವಂಥ ವಾಕಾಟಿಪು ಸರೋವರದ ದಂಡೆಯ ಒಂದು ಭಾಗದಲ್ಲಿ ಕ್ವೀನ್ಸ್‌ಟೌನ್ ನಗರ ಹರಡಿಕೊಂಡಿದೆ.

ಬಹಳಷ್ಟು ಪ್ರವಾಸಿಗರು ಕ್ವೀನ್ಸ್‌ಟೌನಿನಿಂದ ಮಿಲ್‌ಫೋರ್ಡ್ ಸೌಂಡಿಗೆ ಹೋಗುತ್ತಾರೆ. ಅದು ನ್ಯೂಜಿಲೆಂಡಿನ ಅತ್ಯಂತ ಸುಂದರ, ಅತ್ಯಂತ ಅಪಾಯಕರ ರಸ್ತೆ. ಪಯಣ ಅವಿಸ್ಮರಣೀಯ. ಹೆಚ್ಚಿನವರು ಟೂರಿಸ್ಟ್ ಬಸ್ಸುಗಳಲ್ಲಿ ಹೋಗುತ್ತಾರೆ. ಬೈಕ್, ಕಾರುಗಳನ್ನು ತಾವೇ ಚಲಾಯಿಸಿಕೊಂಡು ಹೋಗಿ ನೋಡುವವರು; ಟ್ರೆಕಿಂಗ್ ಟ್ರ್ಯಾಕುಗಳಲ್ಲಿ ತಂಡವಾಗಿ ಪರ್ವತಗಳ ಹಾಯುತ್ತ ನಡೆದು ತಲುಪುವವರು; ನಡುನಡುವೆ ಸರೋವರಗಳನ್ನು ದೋಣಿಯಲ್ಲಿ ದಾಟಿ ಮುಟ್ಟುವವರು; ವಿಮಾನದಲ್ಲಿ ಹೋಗಿ ನೋಡುವವರೂ ಇದ್ದಾರೆ.

ನಾವು ಬೆಳಕು ಹರಿಯುವ ಮೊದಲೇ ಹೊರಟೆವು. ಬಸ್ಸಿನೊಳಗೆ ಎಪ್ಪತ್ತು ದಾಟಿದ ಭಾರೀ ಆಳ್ತನದ ಹಿರಿಯರೊಬ್ಬರು ಬರಮಾಡಿಕೊಂಡರು. ಗೈಡ್ ಆಗಿ ಜೊತೆಯಾದ ಅವರು ಇತಿಹಾಸ, ಮಾನವಶಾಸ್ತ್ರ, ಜಿಯಾಲಜಿ, ಬಾಟನಿಗಳಲ್ಲೆಲ್ಲ ಅಪಾರ ತಿಳಿವಳಿಕೆಯಿರುವ ನಿವೃತ್ತ ಪ್ರೊಫೆಸರರು ಎಂದು ನಂತರ ತಿಳಿಯಿತು. 270 ಕಿ.ಮೀ. ದೂರವನ್ನು ಐದು ತಾಸು ಕ್ರಮಿಸಬೇಕು. ನಡುನಡುವೆ ಕಾಡಿನೊಳಹೊಕ್ಕು ಓಡಾಡಲು, ನದಿ ಪಕ್ಕ ನಡೆಯಲು, ಸುರಂಗದ ಬಳಿ ಕಾಯಲು ಒಂದಷ್ಟು ನಿಲುದಾಣಗಳಿವೆ. ರಭಸದ ಮಳೆ ಪಯಣವನ್ನು ನಿಧಾನಗೊಳಿಸುವ ಸಾಧ್ಯತೆ ಹೆಚ್ಚಿದೆ.

ಕ್ವೀನ್ಸ್‌ಟೌನ್ ಬಿಟ್ಟು ಹೆಚ್ಚುಕಡಿಮೆ ಒಂದು ತಾಸು ಕಳೆಯುವವರೆಗೆ ವಾಕಾಟಿಪು ಸರೋವರ ನಮ್ಮೊಡನಿತ್ತು. ಒಂದೆಡೆ ಸರೋವರ, ಮತ್ತೊಂದೆಡೆ ಹಿಮಚ್ಛಾದಿತ ಆಲ್ಪ್ಸ್. ನಿಸರ್ಗದ ಸೊಬಗು ತುಂಬಿಕೊಳ್ಳಲು ಎರಡು ಕಣ್ಣು ಸಾಲದು.

ಒಂದಷ್ಟು ದೂರ ಕ್ರಮಿಸಿದ ಬಳಿಕ ಮಿರರ್ ಲೇಕ್ಸ್ ಇರುವ ತಾಣದಲ್ಲಿ ವಾಹನ ನಿಂತಿತು. ರಸ್ತೆಯ ಪಕ್ಕದಿಂದ ಹತ್ತು ನಿಮಿಷ ನಡೆದರೆ ಸರೋವರ ಕಾಣುತ್ತದೆ. ಅಲ್ಲಿ ಅಂತಹ ಹಲವು ಸರೋವರಗಳಿವೆ. ಅಲ್ಲಿನ ನೀರು ಎಷ್ಟು ತಿಳಿ, ನಿಶ್ಚಲ ಮತ್ತು ಶುದ್ಧ ಎಂದರೆ ಪರ್ವತ, ಆಗಸಗಳ ಪ್ರತಿಬಿಂಬ ಸ್ಪಷ್ಟವಾಗಿ ನೀರಿನಲ್ಲಿ ಕಾಣಿಸುತ್ತದೆ.

ನಮ್ಮ ಗೈಡ್ ತನ್ನ ದೇಶದ ವಿಶಿಷ್ಟ ವಸ್ತುವೊಂದರ ಬಗೆಗೆ ಗಮನಸೆಳೆದರು. ಅದು ಮನೂಕ ಜೇನು. ಮನೂಕ ಎಂಬ ಮಾವೊರಿ ಹೆಸರಿನ ಪೊದೆಗಿಡದ ಹೂವಿನಿಂದ ಜೇನುಹುಳುಗಳು ತಯಾರಿಸುವ ಜೇನು ವಿಶ್ವ ಪ್ರಸಿದ್ಧವಂತೆ. ಅದು ನ್ಯೂಜಿಲೆಂಡ್ ಮತ್ತು ದಕ್ಷಿಣ ಆಸ್ಟ್ರೇಲಿಯಾದಲ್ಲಿ ಮಾತ್ರ ತಯಾರಾಗುವ ಜೇನಂತೆ. ಜೋನಿ ಬೆಲ್ಲದಷ್ಟು ದಪ್ಪಗಿರುವ, ಮಣ್ಣಿನ ಪರಿಮಳವನ್ನೂ, ವನಸ್ಪತಿಯ ತಿಳಿ ಘಾಟನ್ನೂ ಹೊಂದಿರುವ ಅದು ಭಾರೀ ಬೇಡಿಕೆಯ ವಸ್ತುವಂತೆ. ಅದಕ್ಕಿರುವ ಔಷಧೀಯ ಗುಣಗಳು, ಸೌಂದರ್ಯವರ್ಧಕವಾಗಿ ಬಳಕೆ, ಮಾರುಕಟ್ಟೆ ಸೃಷ್ಟಿಸಿದ ಹಗೆತನ, ಸ್ಪರ್ಧೆ, ಶುದ್ಧತೆ ನೋಡಲು ರೂಪಿಸಿರುವ ಐದು ಮಾನದಂಡಗಳು, ಆದರೂ ನಡೆಯುವ ಕಲಬೆರಕೆಗಳ ಬಗೆಗೆ ಗೈಡ್ ವಿವರಿಸಿದರು. ನಾವು ಹೋದದ್ದು ಮನೂಕ ಹೂ ಋತುವಲ್ಲ. ಗಾಳಿ ಬೀಸಿದ ದಿಕ್ಕಿಗೆ ಸರಿಯಾಗಿ ತಮ್ಮ ಇಡಿಯ ಕಾಂಡವನ್ನು ವಾಲಿಸಿ ನಿಂತ ಮನೂಕ ಗಿಡಗಳನ್ನಷ್ಟೇ ನೋಡಲು ಸಾಧ್ಯವಾಯಿತು.

ಅರ್ಧ ದಾರಿ ಸವೆಸಿದಾಗ ಟೆ ಆನಾ ಊರು, ಅದೇ ಹೆಸರಿನ ಸರೋವರ ಬಂದವು. ಊರು ದಾಟಿದ ಮೇಲೆ ನಮ್ಮ ಬಸ್ಸು ಶುಭ್ರ ನೀರಿನ ನದಿಯ ಪಕ್ಕ ಸರಿದು ಹೋಗತೊಡಗಿತು. ಅದು ವಾಕಾಟಿಪು ಕಾ ಟುಕಾ ಅಥವಾ ಹಾಲಿಫೋರ್ಡ್ ನದಿ.

ಕಡಿದಾದ ಪರ್ವತಗಳ ಸೆರಗಿನಲ್ಲಿ ಹಾವಿನಂತೆ ಹರಿದು ಹೋಗುವ ರಸ್ತೆಯಲ್ಲಿ